ಇ) ಶಿವಮೊಗ್ಗ ನಗರದಲ್ಲಿ ಪರಿಶಿಷ್ಟ ಜಾತಿಯ ಒಂದು ಮೆಟ್ರಿಕ್ ಪೂರ್ವ ಬಾಲಕ ಹಾಗೂ ಎರಡು ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯಗಳು, ಮೆಟ್ರಿಕ್ ನಂತರದ ಮೂರು ಬಾಲಕ ಮೂರು ಬಾಲಕಿಯರ ವಿದ್ಯಾರ್ಥಿ ನಿಲಯಗಳು ಇರುತ್ತವೆ. ಹಾಗೆಯೇ ಶಿವಮೊಗ್ಗ ನಗರದಲ್ಲಿ ಹಿಂದುಳಿದ ವರ್ಗಗಳ ಎರಡು ಮೆಟ್ರಿಕ್ ಪೂರ್ವ, ಆರು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಇರುತ್ತವೆ. ಶಿವಮೊಗ್ಗ ನಗರದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳ ಕೊರತೆ ಇದೆ. ಇಲ್ಲಿ ಪರಿಶಿಷ್ಟ ವರ್ಗಗಳ ಯಾವುದೇ ವಿದ್ಯಾರ್ಥಿ ನಿಲಯಗಳು ಇರುವುದಿಲ್ಲ.

ಈ) ಲಭ್ಯವಿರುವ ಅನುದಾನದ ಆಧಾರದ ಮೇಲೆ ಹೊಸದಾಗಿ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುತ್ತದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉಪಯೋಜನೆ ಹಣ ಬಿಡುಗಡೆ

890 (1369) ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿ/ವರ್ಗಗಳ ಕಲ್ಯಾಣಕ್ಕಾಗಿ 2009–10 ರಲ್ಲಿ ನಿಗದಿಪಡಿಸಲಾದ ಅನುದಾನ ಎಷ್ಟು? ಬಿಡುಗಡೆಯಾದ ಅನುದಾನ ಎಷ್ಟು?

ಆ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಉಪಯೋಜನೆ (ಎಸ್.ಸಿ.ಪಿ ಮತ್ತು ಟಿ.ಎಸ್.ಪಿ) ಯಲ್ಲಿ 2006 ರಿಂದ 2010ರ ವರೆಗೆ ನಿಗದಿಯಾದ ಅನುದಾನವೆಷ್ಟು?

ಇ) ಬಿಡುಗಡೆಯಾದ ಅನುದಾನವೆಷ್ಟು? ಖರ್ಚಾದ ಹಣವೆಷ್ಟು? ಉಳಿಕೆಯಾದ ಹಣವೆಷ್ಟು? ಮಾಹಿತಿ ನೀಡುವುದು?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) 2009–10ನೇ ಸಾಲಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕಾಗಿ ಪರಿಶಿಷ್ಟ ಜಾತಿ ಉಪಯೋಜನೆಯಡಿ ರೂ.2916.59 ಕೋಟಿ ಹಾಗೂ ಗಿರಿಜನ ಉಪಯೋಜನೆಯಡಿ ರೂ.1144.05 ಕೋಟಿಗಳನ್ನು ನಿಗಧಿಪಡಿಸಲಾಗಿದೆ. ಫೆಬ್ರವರಿ 2010ರ ಅಂತ್ಯಕ್ಕೆ (ವಿವಿಧ ಅಭಿವೃದ್ಧಿ

ಇಲಾಖೆಗಳು) ಕ್ರಮವಾಗಿ ರೂ.1796.12 ಕೋಟಿ ಮತ್ತು 695.08 ಕೋಟಿ ಬಿಡುಗಡೆಯಾಗಿರುತ್ತದೆ.

ಆ) ಆ ಸಂಬಂಧದ ವಿವರ ಈ ಕೆಳಗಿನಂತಿದೆ:–

(ರೂ. ಕೋಟಿಗಳಲ್ಲಿ)

ವರ್ಷ	ಪರಿಶಿಷ್ಟ ಜಾತಿ ಉಪಯೋಜನೆಯಡಿ	ಗಿರಿಜನ ಉಪಯೋಜನೆಯಡಿ
2006–07	1457.83	482.16
2007–08	2914.68	1160.87
2008–09	3232.44	1263.89
2009–10	2916.59	1144.05

ಇ) ಆ ಸಂಬಂಧದ ವಿವರ ಈ ಕೆಳಗಿನಂತಿದೆ:–

ಪರಿಶಿಷ್ಟ ಜಾತಿ ಉಪಯೋಜನೆ

(ರೂ.ಕೋಟಿಗಳಲ್ಲಿ)

ವರ್ಷ	ನಿಗದಿಪಡಿಸಿದ ಅನುದಾನ	ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ	ನಿಗದಿಪಡಿಸಿದ ಮೊತ್ತದಲ್ಲಿ ಉಳಿಕೆಯಾದ ಅನುದಾನ
2006–07	1457.83	1400.87	1400.87	56.96
2007–08	2914.68	1982.62	1982.62	932.06
2008–09	3232.44	2575.68	2575.68	656.76
2009–10 * (ಫೆಬ್ರವರಿ 2010ರ ಅಂತ್ಯಕ್ಕೆ)	2916.59	1796.12	1796.12	1120.47

ಗಿರಿಜನ ಉಪಯೋಜನೆ

(ರೂ.ಕೋಟಿಗಳಲ್ಲಿ)

ವರ್ಷ	ನಿಗದಿಪಡಿಸಿದ ಅನುದಾನ	ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ	ನಿಗದಿಪಡಿಸಿದ ಮೊತ್ತದಲ್ಲಿ ಉಳಿಕೆಯಾದ ಅನುದಾನ
2006–07	482.16	475.15	475.15	7.01
2007–08	1160.87	796.05	796.05	364.82
2008–09	1263.89	988.76	988.76	275.13
2009–10 * (ಫೆಬ್ರವರಿ 2010ರ ಅಂತ್ಯಕ್ಕೆ)	1144.05	695.08	695.08	448.97

ಅಭಿವೃದ್ಧಿ ಇಲಾಖೆಗಳು ಪ್ರತಿ ವರ್ಷ ಬಿಡುಗಡೆಯಾದ ಅನುದಾನವನ್ನು ಖರ್ಚು ಮಾಡಲಾಗಿರುತ್ತದೆ.

ಸಣ್ಣ ಹಿಡುವಳಿದಾರರಿಗೆ ಗಂಗಾ ಕಲ್ಯಾಣ ಯೋಜನೆಯಲ್ಲಿ ಸೌಲಭ್ಯಗಳನ್ನು ನೀಡುವುದು

891 (601) ಶ್ರೀ ಲಾಲಾಜಿ ಆರ್.ಮೆಂಡನ್ (ಕಾಪು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಸಣ್ಣ ಹಿಡುವಳಿದಾರರು ಇರುವುದರಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ 20 ಗುಂಟೆ ಜಮೀನು ಇರುವ ಫಲಾನುಭವಿಗಳು ಈ ಸೌಲಭ್ಯವನ್ನು ಪಡೆಯಲು ಸಾಧ್ಯವೇ;

ಆ) ಸರ್ಕಾರ ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳುವುದು;

ಇ) ರಾಜ್ಯದಲ್ಲಿ ಗಂಗಾ ಕಲ್ಯಾಣ ಯೋಜನೆಯಲ್ಲಿ ಒಟ್ಟು ಎಷ್ಟು ಫಲಾನುಭವಿಗಳಿಗೆ ಈ ಯೋಜನೆಯಡಿಯಲ್ಲಿ ಒದಗಿಸಲಾಗಿದೆ; ಇದರ ಒಟ್ಟು ಹಣ ಎಷ್ಟು?